Rotary

ರೋಟರಿ ಐಸಿರಿ ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 16

ದಿನಾಂಕ: 21.10.2025



Rtn. Anil Kumar
President



Rtn. Krishnappa
Secretary

## ರೋಟರಿ ಐಸಿರಿಯಿಂದ "ಎಂಡ್ ಪೋಲಿಯೋ ವಾಕಥಾನ್"







ರೋಟರಿ ಇಂಟರ್ನ್ಯಾಷನಲ್ ನಿರ್ದೇಶನದಂತೆ ಪೋಲಿಯೋ ನಿರ್ಮೂಲನೆಗಾಗಿ ನಿಧಿ ಸಂಚಯನ ಜಾಥಾವನ್ನು ಪರ್ಕಳದ ರೋಟರಿ ಐಸಿರಿಯು ಏರ್ಪಡಿಸಿತ್ತು. ಅಕ್ಟೋಬರ್ 17ರಂದು ನಡೆದ ಈ ವಾಕಥಾನ್ ಗೆ ಪೋಲಿಯೋ ನಿರ್ಮೂಲನ ವಿಭಾಗದ ರೋಟರಿ ಜಿಲ್ಲಾ ಚೇರ್ಮನ್ ರೊ. ಸುಬ್ರಹ್ಮಣ್ಯ ಬಾಸ್ರಿಯವರು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿ, ಕಳೆದ ನಾಲ್ಕು ದಶಕಗಳಿಂದ ರೋಟರಿ ಸಂಸ್ಥೆಯು ವಿಶ್ವದಾದ್ಯಂತ ಪೋಲಿಯೋ ನಿರ್ಮೂಲನ ಕಾರ್ಯಕ್ರಮಕ್ಕೆ ಕೈಜೋಡಿಸಿದೆ. ಇದುವರೆಗೆ ಶೇಕಡ 99.9 ಯಶಸ್ಸನ್ನು ಸಾಧಿಸಿದ್ದರೂ, ಈ ಹಂತದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಕೈಬಿಟ್ಟರೆ, ಪುನಃ ಪೋಲಿಯೋ ಹಾವಳಿ ಹೆಚ್ಚಾಗಿ ವರ್ಷಕ್ಕೆ ಸುಮಾರು ಎರಡು ಲಕ್ಷದಷ್ಟು ಮಕ್ಕಳು ಅಪಾಯಕ್ಕಿಡಾಗುವ ಸಂಭವವಿದೆ. ಹಾಗಾಗಿ ಸಂಪೂರ್ಣವಾಗಿ ನಿರ್ಮೂಲನೆಗೈಯುವ ತನಕ ವಿರಮಿಸುವಂತಿಲ್ಲ. ಈ ನಿಟ್ಟಿನಲ್ಲಿ ರೋಟರಿ ಐಸಿರಿಯು ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಶ್ಲಾಘನೀಯವಾಗಿದೆ ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಪರ್ಕಳದ ಗಾಂಧಿ ಮೈದಾನದ ಬಳಿ ನಡೆದ ಈ ಸರಳ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊ. ಅನಿಲ್ ಕುಮಾರ್ ವಹಿಸಿದ್ದರು. ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್, ಆರ್.ಸಿ. ಸಿ. ಜಿಲ್ಲಾ ಉಪಸಭಾಪತಿ ರೊ. PHF.ಗುರುಪ್ರಸಾದ್ ಕಾಮತ್, ಝೋನಲ್ ಟ್ರೈನರ್ ರೊ.PHF. ಡಾ. ಎ. ಗಣೇಶ, ವಲಯ 4ರ ಪೋಲಿಯೋ ವಿಭಾಗದ ವಲಯ ಸಂಯೋಜಕರಾದ ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ್, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ ಶೆಣೈ, ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್, ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್, ನಿಕಟಪೂರ್ವ ಅಧ್ಯಕ್ಷ ರೊ. ಸುನಿಲ್ ಕುಮಾರ್, ರೋಟರಿ ಐಸಿರಿಯ ಗೃಹಪತ್ರಿಕೆ "ಐಶ್ವರ್ಯ" ಸಂಪಾದಕ ರೊ. ರಾಜೇಶ ಡಿ. ಶೆಣೈ, ರೊ. ಸುದರ್ಶನ್ ಎಸ್ ಪೈ, ರೊ. ನಿಧೀಶ್ ಕುಮಾರ್, Ann. ರೂಪಶ್ರೀ, Ann. ಪಲ್ಲವಿ ಉಪಸ್ಥಿತರಿದ್ದರು.ರೋಟರಿ ಐಸಿರಿಯ ಕಾರ್ಯದರ್ಶಿ ರೊ. ಕೃಷ್ಣಪ್ಪ ವಂದನಾರ್ಪಣೆಗೈದರು.

ಬಳಿಕ ಪರ್ಕಳದ ಪ್ರಮುಖ ಬೀದಿಯಲ್ಲಿ ನಿಧಿ ಸಂಚಯನ ಕಾರ್ಯಕ್ರಮ ನಡೆಯಿತು.

## The roots of Rotary’s polio eradication efforts:

1894: The first major documented **polio outbreak** in the United States occurs in Vermont.

1905: Swedish physician suggests that polio is a **contagious disease** that can spread from person to person.

1908: Two physicians in Vienna discover that polio is **caused by a virus**.

1916: A **major polio outbreak** in New York City kills more than 2,000 people.

1929: Philip Drinker and Harvard University’s Louis Agassiz Shaw Jr. invent an artificial respirator for patients suffering from paralytic polio; the **iron lung**.

1955: A **vaccine developed** by Dr. Jonas Salk is declared “safe and effective.”

1960: The U.S. government licenses the **oral polio vaccine** developed by Dr. Albert Sabin.

1979: **Rotary International** begins its fight against polio with a multi-year project to immunize 6 million children in the Philippines.

1985: Rotary International launches **PolioPlus**, the first and largest internationally coordinated private-sector support of a public health initiative, with an initial fundraising target of US$120 million.

1988: Rotary International and the World Health Organization launch the GPEI (**Global Polio Eradication Initiative**). There are an estimated 350,000 cases of polio in 125 countries.

1994: The International Commission for the Certification of Poliomyelitis Eradication announces that **polio has been eliminated from the Americas**.

1995: Health workers and volunteers immunize 165 million children in China and India in 1 week. Rotary launches the PolioPlus Partners program, enabling Rotary members in **polio-free countries** to provide support to fellow members in polio-affected countries for polio eradication activities.

2000: A record **550 million children** – almost 10% of the world's population – receive the oral polio vaccine. The **Western Pacific region**, spanning from Australia to China, is declared **polio-free**.

2003: The Rotary Foundation raises $119 million in a 12-month campaign. Rotary's total contribution to polio eradication exceeds **$500 million**.

2004: In Africa, synchronized National Immunization Days in 23 countries target **80 million children**, the largest polio immunization effort on the continent.

2006: The number of polio-endemic countries **drops to 4** - Afghanistan, India, Nigeria, Pakistan.

2009: Rotary's overall contribution to the eradication effort nears **$800 million**. In January, the Bill & Melinda Gates Foundation pledges $355 million and issues Rotary a challenge grant of $200 million. This is a combined $555 million in support of the GPEI.

2011: Rotary welcomes celebrities into a new public awareness campaign, includes Nobel Peace Prize Laureate Desmond Tutu, violinist Itzhak Perlman, Bill Gates, Grammy Award-winning singers Angelique Kidjo and Ziggy Marley, and environmentalist Dr. Jane Goodall. Rotary's funding for polio eradication exceeds **$1 billion**.

2012: **India** surpasses 1 year without a recorded case of polio and **is removed from the list** of countries where polio is endemic.

2020: The World Health Organization certifies the **African region wild polio-free**.

2023: Wild Polio cases have decreased by over **99.9%,** from 350,000 in 1985 to just 12 in 2023.




















## ಬೌದ್ಧಿಕ ಸಿರಿ ಟೀಕಾಚಾರ್ಯ

ಆತ ಬಾಲ್ಯದಿಂದಲೂ ಸ್ಫುರದ್ರೂಪಿ, ತೀಕ್ಷ್ಣಮತಿ ಮತ್ತು ಬುದ್ಧಿವಂತ ವಿದ್ಯಾರ್ಥಿ. ಆದರೆ, ಆತ ಸಹಪಾಠಿಗಳಿಗೆ, ಶಿಕ್ಷಕರಿಗೆ, ಊರವರಿಗೆಲ್ಲಾ ಟೀಕೆ ಮಾಡುವುದರಲ್ಲೂ ನಿಷ್ಣಾಥನಾಗಿದ್ದ. ಕಂಡಕಂಡವರ ಹಾವಭಾವ, ನಡೆ–ನುಡಿಗಳನ್ನೆಲ್ಲಾ ಮನಸೋ ಇಚ್ಛೆ ಟೀಕಿಸುವುದು, ಎಲ್ಲರ ಎದುರಿನಲ್ಲಿ ಇನ್ನೊಬ್ಬರನ್ನು ಹಂಗಿಸುವುದು ಇತ್ಯಾದಿಗಳನ್ನು ಮಾಡುತ್ತಲಿದ್ದ. ಪ್ರೌಢಿಮೆಗೆ ಬಂದಾಗಲೂ ಜವಾಬ್ದಾರಿ ತೆಗೆದುಕೊಳ್ಳುವ ವಿಚಾರ ಬಂದಾಗ ಉಪಾಯದಿಂದ ನುಣುಚಿಕೊಳ್ಳುವುದೂ ಈತನಿಗೆ ರೂಢಿಯಾಗಿತ್ತು.

ಈತನಿಗೆ ಬುದ್ಧಿ ಹೇಳಿ, ತಿದ್ದುವವರೇ ಇಲ್ಲವಾಗಿತ್ತು. ಕ್ರಮೇಣ ಈತನ ಇಂಥಹ ಕೃತ್ಯಗಳು ಹೆಚ್ಚಾದವು. ಸ್ವಾಭಾವಿಕವಾಗಿ, ಇವನಿಂದ ಅಂತರ ಕಾಪಾಡಲು ಆರಂಭಿಸಿದರು. ಇವನಂತಹದೇ ವ್ಯಕ್ತಿತ್ವದ ಒಂದಿಬ್ಬರು ಮಾತ್ರ ಸ್ವಲ್ಪಮಟ್ಟಿಗೆ ಸ್ಥಿತಿವಂತನಾಗಿದ್ದ ಇವನ ಜೊತೆ ಸುತ್ತಾಡಿ, ತಿಂದುಂಡು, ಇವನ ಕೃತ್ಯಗಳನ್ನು ಆನಂದಿಸಿ, ಕೇಕೆ ಹಾಕುತ್ತಿದ್ದರು.

ಹೀಗಿರುವಾಗ ಈತನಿಗೆ ತನ್ನನ್ನೇ ಅವಲಂಬಿಸಿರುವ ಈ ಇಂದಿಬ್ಬರು ಒಡನಾಡಿಗಳೂ ತನ್ನನ್ನು ಜೋಕರ್ ನಂತೆ ಪರಿಗಣಿಸುತ್ತಿರುವುದು, ಹಣದಾಸೆಗೆ ಮಾತ್ರ ತನ್ನೊಡನೆ ತಿರುಗಾಡುವುದು, ಊರಿನ ಜನರೆಲ್ಲಾ ಇವನಿಂದ ಅಂತರ ಕಾಪಾಡಿಕೊಳ್ಳುವುದನ್ನು ಗಮನಿಸಿ, ಒಂಟಿತನ ಕಾಡಲಾರಂಭಿಸಿತು. ಜೀವನವೇಬೋರ್ ಹೊಡೆಯಲು ಆರಂಭಿಸಿತು.

ಬದಲಾವಣೆಗಾಗಿ, ಈತ ಅಕ್ಕಪಕ್ಕದ ಊರುಗಳಿಗೆ, ದೇವಾಲಯಗಳಿಗೆ ಸುತ್ತಾಡಲಾರಂಭಿಸಿದ. ಒಂದೂರಿನಲ್ಲಿ ಒಬ್ಬ ಗುರುವನ್ನು ನೋಡಿ ಆಕರ್ಷಿತನಾದ ಈತ, ಅವರ ಬಳಿ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾ, "ನಾನೇನಿದ್ದರೂ ನೇರ ನಡೆ–ನುಡಿಯವನು, ಕಂಡದ್ದನ್ನು ಕಂಡಂತೆ ಹೇಳುವವನು, ಆದರೂ ನನಗೇಕೆ ಈ ರೀತಿ ಆಗುತ್ತದೆ" ಎಂದನು.

ಈತನ ನಡವಳಿಕೆಯನ್ನು ಅರ್ಥಮಾಡಿಕೊಂಡ ಗುರುವು ಈತನಿಗೆ "ಇನ್ನು ಮುಂದೆ ಯಾವತ್ತೂ ಮಾತನಾಡುವಾಗ ಈ ಕೆಳಗಿನ ವಾಕ್ಯಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡು, ನಿನಗೆ ಒಳ್ಳೆಯದಾಗುತ್ತದೆ. ಮುಂದಿನ ವರ್ಷ ಇದೇ ಸಮಯ ಇಲ್ಲಿಗೆ ಬಂದು ತನ್ನನ್ನು ಭೇಟಿಯಾಗು. ಮುಂದೆ ಏನು ಮಾಡಬೇಕೆಂದು ತಿಳಿಸುತ್ತೇನೆ" ಎಂದು ಈ ಸುಭಾಷಿತವನ್ನು ಹೇಳಿದರು.

**ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್, ನ ಬ್ರೂಯಾತ್ ಸತ್ಯಮಪ್ರಿಯಂ । ಪ್ರಿಯಂ ಚ ನಾನೃತಂ ಬ್ರೂಯಾತ್, ಏಷ ಧರ್ಮಃ ಸನಾತನಃ ॥** ತಾತ್ಪರ್ಯ ಏನೆಂದರೆ,

ಸತ್ಯವನ್ನೇ ಹೇಳಬೇಕು. ಪ್ರಿಯವಾದುದನ್ನೇ ಹೇಳಬೇಕು. ಸತ್ಯವಾದರೂ ಅಪ್ರಿಯವಾದುದನ್ನು, ಅಂದರೆ ಬೇರೆಯವರಿಗೆ ನೋವಾಗುವುವಂತಿದ್ದರೆ ಅಂತಹ ಅಪ್ರಿಯವಾದ ಸತ್ಯವನ್ನು ಹೇಳಕೂಡದು. ಹಾಗೆಯೇ ಬೇರೆಯವರಿಗೆ ಸಂತೋಷವಾಗುತ್ತದೆಂದು, ಅವರಿಗೆ ಪ್ರಿಯವಾಗುವ ಸುಳ್ಳನ್ನೂ ಹೇಳಕೂಡದು. ಇದೇ ನಿಜವಾದ ಸನಾತನ ಧರ್ಮ.

## ಅಕ್ಟೋಬರ್ 14 ರ ಸಭೆಯ ಝಲಕ್
















## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 15ನೇ ವಾರದ ಸಭೆ 14/10/2025 ರಂದು RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಗುರುಪ್ರಸಾದ್ ಕಾಮತ್ ಕೊರಳಲಾಂಚನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಗುರುಪ್ರಸಾದ್ ಕಾಮತ್ ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಕಳೆದ ವಾರದ ವರದಿಯನ್ನು ಮಂಡಿಸಿದರು.

ರೊ. ಸ್ಮಿತಾ ಕಾಮತ್ ಅವರು ವಲಯ ಹಾಗೂ ಜಿಲ್ಲೆಯ ಪಲ್ಸ್ ಪೋಲಿಯೋ ಮತ್ತು TRF ಸೆಮಿನಾರ್ ಬಗ್ಗೆ ಮಾಹಿತಿ ನೀಡಿದರು. ವಾರದ ಸಂಚಿಕೆ ಐಶ್ವರ್ಯವನ್ನು ರೊ. ಮಂಜುನಾಥ್ ಉಪಾಧ್ಯ ಬಿಡುಗಡೆ ಗೊಳಿಸಿ ಸಂಚಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಸಹಕರಿಸಿ, ರೋಟರಿ ಉತ್ಸಾಹ ಪ್ರತಿ ಕಾರ್ಯಕ್ರಮದಲ್ಲೂ ಉತ್ತಮ ಫಲಿತಾಂಶ ನೀಡುತ್ತಿದೆ ಎಂದರು.

ರೋಟರಿ ಐಸಿರಿಯ ಸಾಂಸ್ಕೃತಿಕ ಕಾರ್ಯಕ್ರಮ ಸಂಯೋಜಕರಾದ ರೊ. ಸ್ವಾತಿ ಅವರು ವಲಯ ಸಾಂಸ್ಕೃತಿಕ ಸ್ಪರ್ಧೆಗಳ ಪೂರ್ವತಯಾರಿಯ ಬಗ್ಗೆ ಮಾಹಿತಿ ನೀಡಿ ಎಲ್ಲ ವಿಭಾಗಗಳಲ್ಲಿ ಭಾಗವಹಿಸುವಂತೆ ಹುರಿದುಂಬಿಸಿದರು. ರೊ. ನಾಗರಾಜ್ ನಾಯಕ್ ಅವರು ಮಾತನಾಡಿ ರೋಟರಿ ಐಸಿರಿಯ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು. ಜೊತೆಗೆ ಶ್ರೀ ಬ್ರಹ್ಮರಾಮೇಶ್ವರ ಭಜನಾ ಮಂಡಳಿಗೆ ಅಗತ್ಯವಿರುವ ಕಾಮಗಾರಿಗಳು ನಡೆಯುತ್ತಿದ್ದು ಇದಕ್ಕಾಗಿ ಸಹಕರಿಸಬೇಕೆಂದು ಮನವಿ ಪತ್ರ ನೀಡಿದರು. ಅಧ್ಯಕ್ಷರು ರೊ. ನಾಗರಾಜ್ ನಾಯಕ್ ಅವರನ್ನು ಅವರ ಕಾರ್ಯಕ್ಷೇತ್ರವಾದ ಸಹಕಾರಿ ಬ್ಯಾಂಕ್ ನಲ್ಲಿ ವಿಶೇಷ ಸಾಧನೆಗಾಗಿ ಗುರುತಿಸಿದರು.

ಜೊತೆ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಫೆಬ್ರವರಿ 8ಕ್ಕೆ ನಡೆಯಲಿರುವ RCC ಜಿಲ್ಲಾ ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದರು. ಹಾಗೂ ವಲಯ ಕಲ್ಚರಲ್ ಸ್ಪರ್ಧೆಯಲ್ಲಿ ಭಾಗವಹಿಸುವ ಬಗ್ಗೆ ಪ್ರೋತ್ಸಾಹಿಸಿದರು. ರೋಟರಿ ಅಂತಾರಾಷ್ಟ್ರೀಯ ವಲಯ 7 ರಿಂದ ಕೊಡಲ್ಪಟ್ಟ ಪೋಲಿಯೋ ನಿರ್ಮೂಲನೆಗೆ ಧನಸಹಾಯ ಸಂಗ್ರಹಿಸುವ ಹುಂಡಿಯನ್ನು ಐಸಿರಿಯ TRF Chairman ರೊ. ಪಾಂಡುರಂಗ ಲಾಗ್ವಾಂಕರ್ ಉದ್ಘಾಟನೆ ಮಾಡಿದರು. ಹಲವಾರು ಸದಸ್ಯರು ತಮ್ಮ ದೇಣಿಗೆಯನ್ನು ನೀಡಿ ಶುಭ ಹಾರೈಸಿದರು.

ರೊ. ಎ. ಗಣೇಶ್ ಅವರು October 23ರಂದು ನಡೆಯಲಿರುವ ಪಲ್ಸ್ ಪೋಲಿಯೋ ಜನಜಾಗೃತಿ ಪಥಸಂಚಲನದ ಬಗ್ಗೆ ಮಾಹಿತಿ ನೀಡಿದರು. ವಲಯ ಮಟ್ಟದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಪೋಲಿಯೋ ಧನಸಂಗ್ರಹಣೆಗಾಗಿ ಜಾಥಾ ನಡೆಸುವಂತೆ ಅಭಿಪ್ರಾಯ ಪಟ್ಟರು. ಸದಸ್ಯರೆಲ್ಲರೂ ಸಹಕಾರ ಸೂಚಿಸಿದರು. ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ರೋಟರಿ ಐಸಿರಿಯ ಎಲ್ಲಾ ಕಾರ್ಯಕ್ರಮಗಳಿಗೂ ಸಕ್ರಿಯವಾಗಿ ಭಾಗವಹಿಸುವ ಆಶ್ವಾಸನೆ ನೀಡಿದರು.

ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು 17/10 ಶುಕ್ರವಾರ ಪೋಲಿಯೋ ಜಾಥಾ ನಡೆಸುವುದಾಗಿ ಹಾಗೂ 19/10 ಭಾನುವಾರ ನಾರಾಯಣ ಗುರು ಸೇವಾ ಸಂಘ ಹಾಗೂ RCC ಯವರ ಸಹಭಾಗಿತ್ವದಲ್ಲಿ economic and community development ಬಗ್ಗೆ ಮಾಹಿತಿ ಕಾರ್ಯಾಗಾರ ನಡೆಸುವುದಾಗಿ ತಿಳಿಸಿದರು.

Nov 10 ರಂದು ಐಸಿರಿಯ ಆತಿಥ್ಯದಲ್ಲಿ ನಡೆಯಲಿರುವ ವಲಯ ಪುನರಾವಲೋಕನ ಸಭೆ ಹಾಗೂ ಡಿಸೆಂಬರ್ 16 ರಂದು ನಡೆಯಲಿರುವ ಜಿಲ್ಲಾ ಗವರ್ನರ್ ಅಧಿಕೃತ ಭೇಟಿ ಬಗ್ಗೆ ಪೂರ್ವತಯಾರಿ ನಡೆಸುವಂತೆ ಕರೆ ನೀಡಿದರು. Nov 16ರಂದು ಆಧಾರ್ ತಿದ್ದುಪಡಿ ಕಾರ್ಯಕ್ರಮ ನಡೆಸುವುದಾಗಿ ದಿನ ನಿಗದಿಗೊಳಿಸಿದರು.

ಅದೃಷ್ಟಶಾಲಿ ರೋಟರಿಯನ್ ಆಯ್ಕೆಯನ್ನು ರೊ. ಸಂದೀಪ್ ಕುಮಾರ್ ನಡೆಸಿ, ರೊ. ಸುಕೇಶ್ ಕುಂದರ್ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ರೊ. ಗುರುಪ್ರಸಾದ್ ಕಾಮತ್ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 15 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿನೈದನೇ** ಆವೃತ್ತಿಯನ್ನು ರೋಟರಿ ಐಸಿರಿಯ ಅಂತಾರಾಷ್ಟ್ರೀಯಸೇವಾ ನಿರ್ದೇಶಕರಾದ Rtn. MPHF. ಮಂಜುನಾಥ್ ಎಂ. ಉಪಾಧ್ಯರವರು 14/10/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ **ಹದಿನೈದನೇ** ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ನಡೆಸಿ, ರೊ. ಸುಕೇಶ್ ಕುಂದರ್ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ರೊ.ನಾಗರಾಜ್ ನಾಯಕ್ ಅವರು ಶ್ರೀ ಬ್ರಹ್ಮರಾಮೇಶ್ವರ ಭಜನಾ ಮಂಡಳಿಯ ಕಾರ್ಯಕ್ರಮದ ಆಹ್ವಾನ ಪತ್ರಿಕೆ ನೀಡಿ, ಕಾರ್ಯಕ್ರಮದ ಯಶಸ್ಸಿಗೆ ರೋಟರಿ ಐಸಿರಿಯ ಸರ್ವ ಸದಸ್ಯರ ಸಹಕಾರ ಕೋರಿದರು.